ಶ್ರೀ ಕೆ. ಟಿ. ರಾಥೋಡ್.—ಎರ್ನಾ ದೃಷ್ಟಿಯಿಂದ ನೋಡುವುದಾದರೆ, ಈಗ ಒದಗಿಸಿರತಕ್ಕ ಹಣ ಕಡಮೆಯಾಗಿದೆ ಎಂದು ನನಗಾದರೂ ಅನಿಸುತ್ತಾ ಇಲ್ಲ. ಅಲ್ಲಿನ ಪರಿಸ್ಥಿತ ಮತ್ತು ಉತ್ಪನ್ನ ಜಾಗದ ಅವಕಾಶಗಳನ್ನು ನೋಡಿಕೊಂಡು ನಾವು ವಿಶೇಷವಾದಂಥ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಈಗ ಕಳೆದ 6-7 ತಿಂಗಳುಗಳಿಂದ ಸರಕಾರದವರು ಅಲ್ಲಿ ವಿಶೇಷವಾದಂಥ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ.

Registration of Unqualified Doctors as R.M.P.S.

10. **S. M. SHEERANALY CHANDRASEKHAR** (Hosanagar).—

Will the Minister for Health be pleased to state :—

(*a*) whether it is a fact that the Government of India has asked the State Government to reconsider its earlier decision regarding registration of unqualified doctors as registered medical practitioners ;

(*b*) if so, the action taken on the suggestions made by the Government of India ?

Sri H. SIDDAVEERAPPA (Minister for Health)-—

(*a*) Yes.

(*b*) The matter is under examination.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಾವು ಹಿಂದೆ ಕೈಗೊಂಡ ಆಧಾರದ ಮೇಲೆ ಕೇಂದ್ರ ಸರ್ಕಾರವು ಆದೇಶ ಏನು? ಅದರ ಬಗ್ಗೆ ತಾವು ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

†ಶ್ರೀ ಎಚ್. ಸಿದ್ಧವೀರಪ್ಪ.—ಅವರು ಹಿಂದೆ ಕೇಳಿದ್ದು, ನಾನ್ ಕ್ವಾಲಿಫೈಡ್ ಮೆಡಿಕಲ್ ಪ್ರ್ಯಾಕ್ಟಿಷನರ್‌ಗಳು ಬಹಳ ಜನರಿದ್ದಾರೆ, ದೇಶದಲ್ಲಿ ಅವರಿಗೆ ಪ್ರ್ಯಾಕ್ಟೀಸ್ ಮಾಡಲಿಕ್ಕೆ ಅವಕಾಶ ಮಾಡಿಕೊಡಿ ಎಂದು. ಅದಕ್ಕೆ ಆಗುವುದಿಲ್ಲ ಎಂದು ಜವಾಬು ಕೊಟ್ಟಿದ್ದಾರೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್. - ಅನಂತರ, ಬೇರೆ ಯಾವುದಾದರೂ ಆದೇಶ ಕೇಂದ್ರ ಸರಕಾರದವರಿಂದ ಬಂದಿದೆಯೇ ?

ಶ್ರೀ ಎಚ್. ಸಿದ್ಧವೀರಪ್ಪ.—ಪುನರ್ ಪರಿಶೀಲನೆ ಮಾಡಿ ಎಂದು ಬಂದಿದೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ.

ಶ್ರೀ ಎಚ್. ಸಿದ್ಧವೀರಪ್ಪ.—ಇದನ್ನು ಪುನರ್ ಪರಿಶೀಲನೆ ಮಾಡುವುದಕ್ಕಾಗಿ, ಇಂಡಿಯನ್ ಮೆಡಿಕಲ್ ಕಾನ್ಸಿಲ್ ಮತ್ತು ಸ್ಟೇಟ್ ಮೆಡಿಕಲ್ ಕಾನ್ಸಿಲ್ ಅವರನ್ನು ಕೇಳಿದ್ದಕ್ಕೆ ಅವರು ಅವರಿಗೆ ಸರಿಯಾಗಿ ಗೊತ್ತಿರುವುದಿಲ್ಲ, ಆದುದರಿಂದ, ಅವಕಾಶ ಕೊಡಕೂಡದು ಎಂದು ಒಂದುಸಲ ಕೇಳಿದ್ದಾರೆ; ಇನ್ನೊಂದು ಸಲ, 10 ವರ್ಷ ಮೇಲ್ಪಟ್ಟು ಕೆಲಸ ಮಾಡಿದ್ದರೆ, ಅವರಿಗೆ ಪ್ರ್ಯಾಕ್ಟೀಸ್ ಮಾಡುವುದಕ್ಕೆ ಅವಕಾಶ ಕೊಡಬಹುದು ಎಂದು ಕೇಳಿದ್ದಾರೆ. ಸರಕಾರ, ಇವರ ಬಗ್ಗೆ ಇನ್ನೂ ಯಾವುದೂ ತೀರ್ಮಾನವನ್ನು ತೆಗೆದುಕೊಂಡಿಲ್ಲ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಹಾಲಿ, ಕೆಲವು ಕಾಲ ಕಾಂಪೌಂಡರ್ ಆಗಿದ್ದವರೂ ಕೂಡ, ರಿಜಿಸ್ಟರ್ ಮಾಡಿಸಿಕೊಂಡು, ಹಳ್ಳಿಗಳಲ್ಲಿ ಡಾಕ್ಟರ್ ಎಂದು ಬೋರ್ಡ್ ಹಾಕಿಕೊಂಡು ಪ್ರ್ಯಾಕ್ಟೀಸ್ ಮಾಡುತ್ತಾ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಸಿದ್ಧವೀರಪ್ಪ.—ಮಾಡುತ್ತಾ ಇರುವುದು ಗಮನಕ್ಕೆ ಬಂದಿದೆ. ಮೆಡಿಕರ್ ಆ್ಯಕ್ಟ್ ಪ್ರಕಾರ ಯಾವ ಕ್ರಮವನ್ನೂ ತೆಗೆದುಕೊಳ್ಳಬೇಡಿ ಎಂದು ಕೇಂದ್ರ ಸರಕಾರದ ಆದೇಶ ಇದ್ದುದರಿಂದ ಇದುವರೆಗೂ ಯಾವ ಕ್ರಮವನ್ನು ಸರಕಾರದವರು ತೆಗೆದುಕೊಂಡಿಲ್ಲ.

MADAM SPEAKER.—Now Question Hour is over.